ಓ.ಎಸ್. ನಂಃ 233/2020
ಪಿ.ಡಬ್ಲ್ಯೂ-3 (ಆನಂದ)

ದಿನಾಂಕ: 21-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ.ಎಸ್.ಜಿ.ಟಿ. 1ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ಬಿ.ಎಸ್.ಸಿ ಪದವಿಧರನಿರುತ್ತೇನೆ. ನನಗೆ ಈಗ 49 ವರ್ಷ ವಯಸ್ಸು ಇದೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ವಯಸ್ಸು ಬರೆಯಿಸಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಹುಟ್ಟಿದ ದಿನಾಂಕ 20/02/1976 ಎಂದರೆ ಸರಿ. ದಿನಾಂಕ 10/08/1990 ರಂದು ನನಗೆ 13 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಆ ಸಮಯದಲ್ಲಿ ನಾನು ಶಾಲೆಗೆ ಹೋಗುವುದನ್ನು ಹೊರತುಪಡಿಸಿ ಬೇರೆ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿ. ನನ್ನ ಪದವಿ ಮುಗಿಯುವವರೆಗು ನಾನು ಬೇರೆ ಕೆಲಸಕ್ಕೆ ಹೋಗುತ್ತಿರಲಿಲ್ಲ ಎಂದರೆ ತಮ್ಮ ತಂದೆಯ ಕಚೇರಿಗೆ ಹೋಗುತ್ತಿದ್ದೆ.

2. ನಿಪಿ-29 ರಲ್ಲಿರುವ ದಸ್ತು ಬರಹಗಾರರ ಸಹಿ ನಿಪಿ-29(ಎ) ನನ್ನ ತಂದೆಯ ಸಹಿ ಎಂದು ತೋರಿಸಲು ಯಾವುದೇ ದಾಖಲೆ ಹಾಜರ ಮಾಡಿಲ್ಲ. ಈ ದಾವೆಯನ್ನು ಯಾರು ಯಾರ ಮೇಲೆ ಹೂಡಿದ್ದಾರೆ ಮತ್ತು ಎಷ್ಟು ಆಸ್ತಿಗಳ ಮೇಲೆ ಹೂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯ ಬಗ್ಗೆ ಮತ್ತು ವಾದಿ ಮತ್ತು ಪ್ರತಿವಾದಿಯರ ಬಗ್ಗೆ ನನಗೆ ಏನೂ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 10/08/1990 ರಂದು ನಾನು ನಮ್ಮ ತಂದೆಯ ಕಚೇರಿಯಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಮೃತ್ಯು ಪತ್ರಕ್ಕೆ ಯಮನವ್ವ ಇವರು ತಮ್ಮ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಮನವ್ವ ಇವರ ಹೇಳಿಕೆಯ ಪ್ರಕಾರ ಮೃತ್ಯು ಪತ್ರವನ್ನು ನಮ್ಮ ತಂದೆ ತಯಾಗಿಸಿದ್ದು ಅದಕ್ಕೆ ಬಿ. ಆರ್. ಹೊರಟ್ಟಿ ಹಾಗೂ ಕೆಂಚಪ್ಪ ಸಿ. ವಡೇರ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 10/08/1990 ರಂದು ಯಮನವ್ವ ನಮ್ಮ ತಂದೆಯ ಕಚೇರಿಗೆ ಬರದೇ ಇದ್ದರೂ ಸಹ ಸಾಕ್ಷಿದಾರರ ಜೊತೆ ಶಾಮೀಲಾಗಿ ಒಂದು ಸುಳ್ಳು ಮೃತ್ಯು ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಗೆ ಅನುಕೂಲ ಆಗಲಿ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಶ್ರೀ.ಎಮ್.ವಾಯ್.ಜೆ. ಪ್ರತಿವಾದಿ 2ಎ ಯಿಂದ 2ಇ ಪ್ರತಿವಾದಿ ಪರ ವಕೀಲರಿಂದಃ**

1ನೇ ಪ್ರತಿವಾದಿ ಪರ ವಕೀಲರು ಮಾಡಿರುವ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

**ಪಾಟೀಸವಾಲುಃ ಶ್ರೀ.ಎಮ್.ಬಿ.ಎಚ್. ಪ್ರತಿವಾದಿ 3 ರಿಂದ 6 ಪ್ರತಿವಾದಿ ಪರ ವಕೀಲರಿಂದಃ**

ಪ್ರತಿವಾದಿ 3 ರಿಂದ 6 ಹಾಗೂ ಅವರ ವಕೀಲರು ಗೈರು ಹಾಜರಿ, ಸದರಿ ಪ್ರತಿವಾದಿಯರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿಲ್ಲ. ಆದ್ದರಿಂದ ಪಾಟೀಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಓ.ಎಸ್. ನಂಃ 233/2020
ಪಿ.ಡಬ್ಲ್ಯೂ-3 (ಆನಂದ)

**<u>ಮರುವಿಚಾರಣೆಃ</u>** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ